

ನೀರಿನ ಗಿರಣಿಗಳು

ಹೊತ್ತಿಗೆ ಇವುಗಳ ಪ್ರಾಮುಖ್ಯ ಕಡಿಮೆಯಾಗಿ, ಉಪಯೋಗಿಸುವವರಿಲ್ಲದೆ ಅಲಕ್ಷ್ಯಕ್ಕೊಳಗಾದವು. ಇತ್ತೀಚಿನ ದಿನಗಳಲ್ಲಿ, ಈ ನೀರಿನ ಗಿರಣಿಗಳನ್ನು ಪುನರ್ನವೀಕರಿಸಿ, ರಾಷ್ಟ್ರೀಯ ಸ್ಮಾರಕಗಳಾಗಿ ಘೋಷಿಸಲಾಗಿದೆ.

ಮುಂದೆ ದಾರಿಯಲ್ಲಿ ಹಸಿರುನೀಲಿ ಬಣ್ಣದ ಶುಭ್ರ ನೀರಿನಿಂದ ತುಂಬಿದ್ದ, ಮತ್ತೊಂದು ಕೊಳ ಕಂಡಿತು. ಮೊದಲಿನ ಕೊಳದಷ್ಟು ದೊಡ್ಡವಿರದಿದ್ದ ಇದರ ಹೆಸರು ಸ್ಮಾಲ್ ಪ್ಲಿವ ಲೇಕ್ (ಮಾಲೋ ಪ್ಲೀವ್ಸ್ಕೊ ಜೆಝೆರೋ). ಆ ಸರೋವರದ ಸೌಂದರ್ಯ ಅಳಿಯದಂತೆ, ಆ ನೆನಪು ಮಾಸದಂತೆ ಉಳಿಸಿಕೊಳ್ಳಲು ಬಹಳಷ್ಟು ಛಾಯಾಚಿತ್ರಗಳನ್ನು ಸೆರೆಹಿಡಿದೆವು. ಬೇಸಿಗೆಯ ಸಮಯದಲ್ಲಿ ಅಲ್ಲಿಗೆ ಬರುವವರ ಸಂಖ್ಯೆ ಹೆಚ್ಚಿರಬಹುದೇನೋ. ನಾವಿದ್ದ ಸಮಯದಲ್ಲಿ ಮಾತ್ರ, ನಮ್ಮನ್ನು ಹೊರತುಪಡಿಸಿ ಸುತ್ತಮುತ್ತ ಯಾರೂ ಇರಲಿಲ್ಲ. ಪ್ರವಾಸಿಗರಿಗೆಂದು ಅಲ್ಲಿ ಬೋಟಿಂಗ್, ಕಯಾಕಿಂಗ್ ಮಾಡುವ ಅವಕಾಶವಿತ್ತು. ಆದರೆ ಸಮಯದ ಅಭಾವವಿದ್ದುದರಿಂದ ಅಲ್ಲಿ ನೀರಿಗಿಳಿಯದೆ ಮುಂದೆ ನಡೆದೆವು.

ನಿಧಾನವಾಗಿ ಅಲ್ಲಲ್ಲಿ ಮನೆಗಳು ಕಂಡುಬಂದವು. ಎತ್ತೆತ್ತರ ಬೆಳೆದ ಹುಲ್ಲುಗಳನ್ನು ಕತ್ತರಿಸುತ್ತಿದ್ದ ಮನೆಯಾತನೊಬ್ಬ ನಮ್ಮನ್ನು ಕಂಡು ಕೈ ಬೀಸಿ ಹಲೋ ಎಂದ. ಅವನ ಮನೆಯೆಡೆಗಿಂದ ಬರುತ್ತಿದ್ದ, ಆಗಷ್ಟೇ ಕತ್ತರಿಸಿದ ಹಸಿ ಹುಲ್ಲಿನ ಘಮ, ನಮ್ಮ ಮನೆಯ ತೋಟದ ನೆನಪನ್ನು ತಂದಿತ್ತು. ಮುಂದೆ ಮಾತು ಬೆಳೆಸಲು ಇಬ್ಬರಿಗೂ ಭಾಷೆಯ ತೊಡಕಿದ್ದುದರಿಂದ ಹೆಚ್ಚು ಹೊತ್ತು ನಿಲ್ಲದೆ ವಿದಾಯ ಹೇಳಿದೆವು.

ಯಾಯ್ಜೆ ಹತ್ತಿರ ಬಂದಂತೆಲ್ಲ ಮನೆಗಳ ಸಂಖ್ಯೆಗಳು ಹೆಚ್ಚಾದವು. ಕಲ್ಲಿನ ಗೋಡೆಯ ಕೆಂಪು ಹೆಂಚಿನ ಹಳೆಯ ಕಟ್ಟಡಗಳು ಹಲವಿದ್ದು, ನಡುವೆ ಅಲ್ಲಲ್ಲಿ ಹೊಸ ಕಟ್ಟಡಗಳು ಎದ್ದು ನಿಂತಿದ್ದವು. ಊರಿನ ಮಧ್ಯದಲ್ಲಿ ಇದ್ದ ಪುಟ್ಟ ಗುಡ್ಡದ ಮೇಲೆ ಕೋಟೆಯ ಅವಶೇಷಗಳಿದ್ದವು. ಅಷ್ಟರಲ್ಲಾಗಲೇ ಬಿಸಿಲೇರಿತ್ತು. ಹಸಿವು ಬೇರೆ. ಹತ್ತಿರದಲ್ಲಿ ಕಂಡ ಕೆಫೆಯೊಂದನ್ನು ಹೊಕ್ಕು ಕಾಫಿ, ಸ್ಯಾಂಡ್ವಿಚ್, ಕೇಕ್ ಹೊಟ್ಟೆಗಿಳಿಸಿಕೊಂಡು ಕೋಟೆಯೆಡೆಗೆ ಹೊರಟೆವು. ದಾರಿಯಲ್ಲಿ ಯಾಯ್ಜೆ ಕ್ಯಾಟಕೂಮ್ ಎಂದು ಕರೆಯಲ್ಪಡುವ ಬಂಡೆಯನ್ನು ಕೊರೆದು ಮಾಡಿದ ನೆಲಮಾಳಿಗೆ ಎದುರಾಯಿತು. ಅದರೊಳಗಿಳಿಯಲು ಸಣ್ಣ ಸಣ್ಣ ಮೆಟ್ಟಿಲುಗಳು. ಇಳಿದಂತೆಲ್ಲ ಕತ್ತಲೆ ತುಂಬಿದ ತಂಪಿನ ವಾತಾವರಣ ಅನುಭವಕ್ಕೆ ಬಂದಿತು. ಹೊರಗಿನ ಶಬ್ದವೊಂದೂ ಕೇಳಿಸದು. ಕೆಳಗೆ ಹತ್ತಿಪ್ಪತ್ತು ಜನ ಸೇರುವಷ್ಟು ಚಿಕ್ಕ ಸಭಾಂಗಣ. ಅದಕ್ಕಂಟಿಕೊಂಡಂತೆ ಸಣ್ಣ ಕೋಣೆಗಳು. ಮಧ್ಯದಲ್ಲೊಂದು ಶಿಲುಬೆ. ಉಳಿದಂತೆ ಯಾವುದೇ ಚಿತ್ರವಾಗಲೀ, ಚಿತ್ತಾರವಾಗಲೀ ಇರಲಿಲ್ಲ. ಸಾಮಾನ್ಯವಾಗಿ ಇಂತಹ ಕ್ಯಾಟಕೂಮ್‌ಗಳನ್ನು ಸಮಾಧಿ ಗೃಹಗಳಾಗಿ ಬಳಸಲಾಗುತ್ತದೆ. ಆದರೆ ಇಲ್ಲಿ ಮನುಷ್ಯ ದೇಹದ ಪಳೆಯುಳಿಕೆಗಳು ಕಂಡುಬಂದಿಲ್ಲ. ಹಾಗಾಗಿ ಇದು ಪ್ರಾರ್ಥನಾ ಮಂದಿರವಿದ್ದರೂ ಇರಬಹುದೆಂಬ ಊಹೆ ಇದೆ.

ಗ್ರೇಟ್ ಪ್ಲಿವ ಲೇಕ್‌ಗೆ ಎದುರಾಗಿ ಕೂತಾಗ



ಮುಂದೆ ಕೋಟೆ ಹತ್ತಲು ಟಿಕೆಟ್ ಕೊಳ್ಳಲು ಹೋದಾಗ ಕೌಂಟರ್‌ನಲ್ಲಿ ಕುಳಿತಿದ್ದಾತ ನಮ್ಮನ್ನು ನೀವು ಭಾರತೀಯರೇ ಎಂದು ಮಾತನಾಡಿಸಿದ. ತನ್ನ ಮನೆಯಲ್ಲಿ ಬಹಳಷ್ಟು ಭಾರತೀಯ (ಬಾಲಿವುಡ್) ಸಿನಿಮಾಗಳನ್ನು ಇಷ್ಟಪಟ್ಟು ನೋಡುತ್ತೇವೆ. ನನ್ನ ತಾಯಿಗೆ ಭಾರತೀಯರು ಧರಿಸುವ ಆಭರಣಗಳೆಂದರೆ ಅಚ್ಚುಮೆಚ್ಚು ಎಂದು ಹೇಳಿದ. ಆ ದೂರದ ಊರಿನಲ್ಲಿ ನಮ್ಮ ದೇಶದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಕೇಳಿ ಖುಷಿಯೆನಿಸಿತು. ಭಾರತದಲ್ಲಿ ಹಿಂದಿಯಷ್ಟೇ ಅಲ್ಲದೆ ಬಹಳಷ್ಟು ಭಾಷೆಗಳಿವೆ ಮತ್ತು ಆ ಭಾಷೆಗಳಲ್ಲಿ ಚಲನಚಿತ್ರಗಳೂ ಬರುತ್ತವೆ ಎಂದವನಿಗೆ ತಿಳಿಸಿ ಟಿಕೆಟ್ ತೆಗೆದುಕೊಂಡು ಒಳಗೆ ಹೋದೆವು. 14–15ನೇ ಶತಮಾನದಲ್ಲಿ ಕಟ್ಟಲಾದ ಈ ಕೋಟೆಯ ಪ್ರವೇಶ ದ್ವಾರವನ್ನು ದಾಟುತ್ತಿದ್ದಂತೆ ಕಾಣುವ ಮಧ್ಯದ ವಿಶಾಲ ಅಂಗಣ, ಅಲ್ಲೊಂದೆರಡು ಚಿಕ್ಕ ಕೋಣೆಗಳು, ಒಂದಷ್ಟು ಮೆಟ್ಟಿಲುಗಳು, ನಾಲ್ಕು ದಿಕ್ಕುಗಳಲ್ಲಿ ಸುತ್ತುವರೆದಿರುವ ಗೋಡೆಗಳನ್ನು ಬಿಟ್ಟರೆ ಒಳಗೆ ಹೆಚ್ಚಿನ ವಿಶೇಷಗಳೇನಿಲ್ಲ. ಆದರೂ ಆ ಎತ್ತರದ ಜಾಗದಲ್ಲಿ ಹತ್ತಿ ನಿಂತು, ಕೆಳಗೆ ಹರಡಿರುವ ಊರಿನ ಬೆಡಗನ್ನು ನೋಡುವುದೇ ಚೆಂದ.

ಸೂರ್ಯ ಅದಾಗಲೇ ಪಶ್ಚಿಮದೆಡೆಗೆ ಮುಖ ಮಾಡಿದ್ದ. ಹೊತ್ತು ಮುಳುಗುವ ಮೊದಲೊಮ್ಮೆ ಊರಿನ ನಟ್ಟನಡುವೆ ಇದ್ದ ಪ್ಲಿವ ಜಲಪಾತವನ್ನು ನೋಡಿಬಿಡುವ ಎಂದು ಗುಡ್ಡವಿಳಿದು ಜಲಪಾತದ ಬಳಿ ಬಂದೆವು. ಪ್ಲಿವ ನದಿ, ವರ್ಬಾಸ್ ನದಿಯನ್ನು ಸೇರುವಲ್ಲಿ ಸುಮಾರು 20 ಮೀಟರ್‌ಗಳಷ್ಟು ಎತ್ತರದಿಂದ ನೊರೆ ನೊರೆಯಾಗಿ ಧುಮುಕಿ ಈ ಸುಂದರ ಜಲಧಾರೆಯನ್ನು ಸೃಷ್ಟಿಸಿದೆ. ಹಿಂದೆ ಈ ಜಲಪಾತ 30 ಮೀಟರ್ ಎತ್ತರವಿದ್ದು, ಇನ್ನೂ ಹೆಚ್ಚು ಆಕರ್ಷಣೀಯವಾಗಿತ್ತಂತೆ. ಆದರೆ 1990ರಲ್ಲಿ ನಡೆದ ಯುದ್ಧದ ಪರಿಣಾಮ, ಅಲ್ಲಿನ ಭೂಪ್ರದೇಶದಲ್ಲಿ ಬದಲಾವಣೆಗಳಾಗಿ ಇದರ ಎತ್ತರ ಕುಗ್ಗಿತು. ಆದರೂ ಇದರ ಚೆಲುವನ್ನು ಅಲ್ಲಗಳೆಯುವಂತಿಲ್ಲ. ತೆಳುವಾದ ಬಿಳಿಯ ಮಣಿ ಮಾಲೆಗಳಂತೆ ಹನಿಹನಿಗಳು ಜೊತೆಗೂಡಿ ಜಿಗಿಯುತ್ತಿದ್ದ ದೃಶ್ಯ ಮೋಹಕವಾಗಿತ್ತು. ಜೊತೆಗೆ ವೈಯಾರವಾಗಿ ಹರಿದು ಬೆರೆಯುತ್ತಿದ್ದ ಎರಡು ನದಿಗಳು, ಹಿಂದಿದ್ದ ಕಟ್ಟಡಗಳ ಸಾಲು, ಅದರಾಚೆಗಿದ್ದ ಗುಡ್ಡ, ಮೇಲೊಂದು ಕೋಟೆ ಇವೆಲ್ಲ ಚಿನ್ನಕ್ಕೆ ಕುಂದಣವಿಟ್ಟಂತಿದ್ದವು.

ನಾವೊಂದಷ್ಟು ಹೊತ್ತು ಅಲ್ಲೇ ಕೂತು, ಒಂದೇ ಸಮನೆ ಬೀಳುತ್ತಿದ್ದ ಜಲಧಾರೆಯ ಸದ್ದಿಗೆ ಕಿವಿಯಾದೆವು. ನಿಧಾನವಾಗಿ ಬಿಸಿಲ ಝಳ ಕುಗ್ಗಿ, ಸಂಜೆ ತಂಪು ಆವರಿಸತೊಡಗಿ, ಹಕ್ಕಿಗಳ ಚಿಲಿಪಿಲಿ ಹೆಚ್ಚಾಗಿ, ದಿನವೊಂದು ಮುಗಿಯಲಿದೆಯೆಂದು ಸೂಚಿಸಿದಂತಾಯ್ತು.